**ಓ ಎಸ್ ನಂ 201/2020**

**ಪಿ. ಡಬ್ಲ್ಯೂ ಃ 1**

**ದಿಃ 11.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 2 ರವರ ಪರ ಶ್ರೀ ಬಿ ಡಿ ಎಸ್ ವಕೀಲರಿಂದ ಃ**

ದಾವಾ ಸ್ವತ್ತಿನ ಶೆಡ್ಯೂಲ್ ಏನು ಇದೆ ಎಂದು ನನಗೆ ಗೊತ್ತು. ದಾವೆಯಲ್ಲಿ ಯಾರು ಯಾರು ಪ್ರತಿವಾದಿಗಳಿರುತ್ತಾರೆ ಎಂದು ಗೊತ್ತು. ದಾವಾ ಸ್ವತ್ತಿನ ಮಾಲೀಕರು ನಾವೇ ಎಂದು ನಿರ್ದಾರ ಮಾಡಬೇಕೆಂದು ದಾವೆ ಹಾಕಿದ್ದೇವೆ. ದಾವಾ ಸ್ವತ್ತಿನ ಚೆಕ್ ಬಂದಿ ಪೂರ್ವಕ್ಕೆ ಈಗ ಲಾವಣ್ಯ ಮೊದಲು ಗರುಡಪ್ಪ ಇವರ ಜಮೀನಿತ್ತು, ಪಶ್ಚಿಮಕ್ಕೆ ಮಲಪ್ಪನಹಳ್ಳಿಯ ಗಡಿ ಉತ್ತರಕ್ಕೆ ಸ.ನಂ. 133/6 ನ ಜಮೀನು ಇದು ರಸ್ತೆಗೆ ಹೋಗಿದೆ ಮತ್ತು ದಕ್ಷಿಣಕ್ಕೆ ಕೆಂಪಗಂಗಯ್ಯ ಇವರ ಜಮೀನು ಇರುತ್ತದೆ. ವಾದಪತ್ರದಲ್ಲಿ ದಾವಾ ಸ್ವತ್ತು ಗರುಡಪ್ಪ ಇವರಿಗೆ ಬಂದಿದೆ ಎಂದು ಹೇಳಿದ್ದೇನೆ ಎಂದರೆ ಸರಿ. ಅದು ಅವರಿಗೆ ಹೇಗೆ ಬಂತು ಎಂಬುವುದರ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿದ್ದೇನೆ. ಕೆಂಪಯ್ಯ ಇವರಿಗೆ 4 ಜನ ಮಕ್ಕಳು ಇರುತ್ತಾರೆ, ಅದರಲ್ಲಿ ಗರುಡಪ್ಪ 2 ನೆಯವರು ಇರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**